ಕೆಲವು ನಿಮಿಷಗಳಲ್ಲಿ ನನ್ನ ಸಹಪಾಠಿಯೊಬ್ಬ ಓಡೋಡಿ ಬರುತ್ತಿರುವುದು ಕಾಣಿಸಿತು. ಆತ ತುಂಬ ಉತ್ಸಾಹದಲ್ಲಿದ್ದ; ನನ್ನನ್ನು ಕಂಡವನೇ ಬಡಬಡಿಸತೊಡಗಿದ – 'ವರ್ ವರ್ ಯೂ? ನಿನ್ನನ್ನು ನಾವು ತುಂಬ ಹುಡುಕಿದೆವು. ಮತ್ತೆ, ನಾವೆಲ್ಲ ಅಲ್ಲೊಂದು ತೆಯ್ಯಮ್ ನೋಡಿದೆವು. ಯೂ ಮಿಸ್ಡ್ ಇಟ್... ಅದ್ಭುತವಾಗಿತ್ತು. ಅದೇನೋ ಗುಳಿಕ ಅಂತಲಂತೆ ಅದರ ಹೆಸರು; ಮನುಷ್ಯನ ನಾಲ್ಕರಷ್ಟು ಎತ್ತರದ ಬಿದಿರಿನ ಕಿರೀಟ ಮಹರಾಯಾ. ಅದೇನು ಕುಣಿತ... ಅದೆಂಥ ಆವೇಶ... ಇಟ್ ವಾಸ್ ಎ ಲೈಫ್ ಛೇಂಜಿಂಗ್ ಎಕ್ಸ್‌ಪೀರಿಯೆನ್ಸ್...' ನಾನು ಆಗಷ್ಟೇ ನಡೆದಿದ್ದ ನನ್ನ 'ಲೈಫ್ ಛೇಂಜಿಂಗ್ ಎಕ್ಸ್‌ಪೀರಿಯೆನ್ಸ್'ನ ಕಥೆಯನ್ನು ಅವನಿಗೆ ಹೇಳಲಿಲ್ಲ. ಬದಲು – 'ಈಗ ಎಲ್ಲಿದ್ದಾರೆ ಅವರೆಲ್ಲ?' ಅಂದೆ. ಆತ ಅತ್ತ ಕೈತೋರಿಸುತ್ತ – 'ಅಲ್ಲೀಗ ಮೈನ್ ತೆಯ್ಯಮ್ ಬರುವ ಹೊತ್ತಾಯಿತು; ನಾವು ಒಳ್ಳೆಯ ಜಾಗ ಹಿಡಿದಿದ್ದೇವೆ, ಬಾ...' ಎನ್ನುತ್ತ ನನ್ನನ್ನು ಎಳೆದೊಯ್ದ.

★★★

ನಾವೀಗ ನಮ್ಮ ತೆಯ್ಯಮ್ ದರ್ಶನದ ಉತ್ತುಂಗದ ಘಟ್ಟಕ್ಕೆ ಕಾದಿದ್ದೆವು. ಮುಖ್ಯ ಗುಡಿಯ ಪಕ್ಕದ ಪುಟ್ಟ ವೃತ್ತಾವರಣವನ್ನು ಧಮಾಸು ಹಾಕಿ ಸಗಣಿ ಸಾರಿಸಿ ಚೊಕ್ಕಟಗೊಳಿಸಿದ್ದರು; ಸುತ್ತ ರಂಗೋಲಿ ಹಾಕಿ ರಂಗಸ್ಥಳದ ಎಲ್ಲೆಗಳನ್ನು ನಿಶ್ಚಯಗೊಳಿಸಿದ್ದರು. ಅಲ್ಲಲ್ಲಿ ಅಡಿಕೆ ತೆಂಗಿನ ಸಿಂಗಾರಗಳೂ ತೆಂಗಿನಕಾಯಿ–ಹೂವಿನ ಹಾರ–ದೀಪದ ಕಂಬಗಳು ಇತ್ಯಾದಿ ಪೂಜಾ ಸಾಮಗ್ರಿಗಳಿದ್ದವು; ಮುಂಡುಟ್ಟು ಅಂಗಿಹಾಕಿಲ್ಲದ ಮೂರ್ನಾಲ್ಕು ಜನ ಉಸ್ತುವಾರಿಯವರು ಆ ಆವರಣದಲ್ಲಿ ಓಡಾಡುತ್ತ ಆಗಾಗ ಆ ದೀಪಗಳಿಗೆ ಎಣ್ಣೆಯುಣ್ಣಿಸುತ್ತಿದ್ದರು. ಆ ವೃತ್ತಕ್ಕೆ ತಾಗಿಕೊಂಡಂತೆ, ಜನ ನಾಲ್ಕೂ ದಿಕ್ಕಿಗೂ ಕಿಕ್ಕಿರಿದು ಕೂಡಿಕೊಂಡಿದ್ದರು; ತಲೆಎತ್ತಿ ನೋಡಿದರೆ, ಸುತ್ತಣಿನ ನಾಲ್ಕಾರು ಮರಗಳ ಮೇಲೆ ಕೂಡಾ ಜನ ಹತ್ತಿ ಕೂತಿದ್ದರು. ಸಮೀಪದ ಒಂದು ಪಾಗಾರದ ಮೋಟುಗೋಡೆಯ ಮೇಲೆ ನಮಗೆ ಒಳ್ಳೆಯದೊಂದು ಕೂರುವ ಜಾಗ ಸಿಕ್ಕಿತ್ತು. ಅಲ್ಲಿಂದ ಸುತ್ತಲಿನ ಇಡೀ ಆವರಣ ಕತ್ತಲೆಯ ನಡುವೆ ದೊಂದಿಗಳ ಬೆಳಕಲ್ಲಿ ಹೊಳೆದು ಕಾಣುತ್ತಿತ್ತು. ಮಧ್ಯರಾತ್ರಿ ಮೀರಿತ್ತು; ಜನರೆಲ್ಲ ತುಂಬ ಕುತೂಹಲದಿಂದ ಕಾಯುತ್ತಿದ್ದರು. ಗುಡಿಯ ಒಳಗಡೆ ಏನೋ ಪಠಣ ನಡೆಯುತ್ತಿತ್ತು; ಪ್ರವೇಶ ಮಾಡುವ ತೆಯ್ಯಮ್ ಅಲ್ಲಿಂದ ಬರುತ್ತದೆಯೆಂದು ಊಹಿಸಿ ನಾವು ಆ ದಿಕ್ಕಿಗೇ ಕಣ್ಣುಗಳನ್ನಿರಿಸಿ ಕಾದಿದ್ದೆವು.

ಗುಡಿಯೊಳಗಿಂದ ಮೊದಲು ಗಂಟೆ–ಜಾಗಟೆಗಳ ಸದ್ದು ಕೇಳಿಸಿತು; ಬಳಿಕ ಚಂಡೆ ಮೊದಲಾದ ವಾದ್ಯಗಳ ಸದ್ದು; ಆಗ ಹೊರಗೆ ಬಿರಿಸಿನ ಕುಡಿಕೆಗಳನ್ನು ಹಾರಿಸಲಾಯಿತು. ಅದರ ನಡುವೆ ಆ ಪ್ರಧಾನ ದೆಯ್ಯ ಹೊರಗೆ ಪ್ರವೇಶ ಮಾಡಿತು. ನನ್ನ ನೆನಪು ಸರಿಯಿದ್ದರೆ, ಅದು ಕುಟ್ಟಿ ಎಂಬ ಹೆಸರಿನ ದೆಯ್ಯ. ಬಣ್ಣಬಣ್ಣದ ಪಟ್ಟಿಗಳ ಚಿತ್ತಾರಗಳಿರುವ ಒಂದು ಪಂಚೆ, ಅದರ ಮೇಲೆ ಅಡಿಗೆ ಕಟ್ಟಿದ ಬಿದಿರಿನ ಆಧಾರದಿಂದಲೋ ಏನೋ ಇನ್ನೊಂದು ನೆರಿಗೆಯ ಲಂಗವು ಆ ದೆಯ್ಯದ ಸೊಂಟವನ್ನು ಆರೇಳು ಅಡಿ ಅಗಲಗೊಳಿಸಿತ್ತು. ಆಭರಣಗಳು ತುಂಬಿ ತುಳುಕುತ್ತಿದ್ದುದರಿಂದ ಅಂಗಿ ಹಾಕಿದೆಯೋ ಇಲ್ಲವೋ ಕಾಣುತ್ತಿರಲಿಲ್ಲ. ಮತ್ತು, ಎಲ್ಲಕ್ಕಿಂತ ಮುಖ್ಯವಾದದ್ದು ನವಿಲು ತನ್ನ ಗರಿಗಳನ್ನೆಲ್ಲ ಬಿಚ್ಚಿನಿಂತರೆ ಕಾಣುವ ಆಕಾರದ ಒಂದು ದೊಡ್ಡ ಶಿರೋಭೂಷಣ. ಕೆಂಪು ಬಣ್ಣವೇ ಪ್ರಧಾನವಾಗಿರುವ ಅದರ ಮೇಲೆ ಎಲೆಯೆಲೆಯಾಗಿ ಹೊರಬಂದ ಚಿತ್ತಾರದ ಜೋಡಣೆಗಳು.

ತಟ್ಟನೆ, ಕಳೆದ ವರ್ಷವಿಡೀ ನಮಗೆ ಸಂಸ್ಕೃತ ನಾಟಕವನ್ನು ತಮ್ಮದೇ ವಿಚಿತ್ರ ಲಹರಿಯಲ್ಲಿ ಪಾಠ ಮಾಡಿದ್ದ ನಿಭಾ ಜೋಷಿ ಮೇಡಂ ನೆನಪಾದರು. ಭಾರತದ ಆಧುನಿಕಪೂರ್ವ ರಂಗಭೂಮಿಗಳ ವೈಶಿಷ್ಟ್ಯ ಏನು ಎಂಬುದನ್ನು ವಿವರಿಸಲಿಕ್ಕೆ ಅವರು ಅಭಿನವಗುಪ್ತಾಚಾರ್ಯರನ್ನು ಉಲ್ಲೇಖಿಸಿದ್ದರು – 'ರಸಾನುಭವ ಹುಟ್ಟುವುದಕ್ಕೆ ಮೂರು ಸಂಗತಿಗಳು ಮುಖ್ಯ: ಒಂದು, ಬಹುತೇಕ ಪಾತ್ರಗಳು ನಾವು